## ಹಳೆ ಟೈಟಲ್, ಹೊಸ ಕಲ್ಯಾಣ!

‘ನಂಜುಂಡಿ ಕಲ್ಯಾಣ’ ಕನ್ನಡ ಚಿತ್ರರಂಗದ ಸಾರ್ವಕಾಲಿಕ ಯಶಸ್ವಿ ಚಿತ್ರಗಳಲ್ಲೊಂದು. ರಾಘವೇಂದ್ರ ರಾಜಕುಮಾರ್ ವೃತ್ತಿಜೀವನದ ಉತ್ತುಂಗದ ಚಿತ್ರವಾದ ‘ನಂಜುಂಡಿ ಕಲ್ಯಾಣ’ದ ಮೂಲಕ ಮಾಲಾಶ್ರೀ ಕನ್ನಡ ಚಿತ್ರರಂಗಕ್ಕೆ ಪರಿಚಯಗೊಂಡಿದ್ದರು. ಈಗ ಅದೇ ಹೆಸರಿನ ಮತ್ತೊಂದು ಸಿನಿಮಾ ತೆರೆ ಕಾಣುವ ಸಿದ್ಧತೆ ನಡೆಸಿದೆ.

ಈ ಕಾಲದ ‘ನಂಜುಂಡಿ ಕಲ್ಯಾಣ’ದ ನಿರ್ದೇಶನ ರಾಜೇಂದ್ರ ಕಾರಂತ್ ಅವರದು. ರಂಗಭೂಮಿಯಲ್ಲಿ ಹಲವು ಪ್ರಯೋಗಗಳ ಮೂಲಕ ಗುರ್ತಿಸಿಕೊಂಡಿರುವ ಕಾರಂತ್, ಕಿರುತೆರೆ ಹಾಗೂ ಬೆಳ್ಳಿತೆರೆಯಲ್ಲಿ ನಟರಾಗಿ ಪ್ರಸಿದ್ದರು. ‘ನಂಜುಂಡಿ ಕಲ್ಯಾಣ’ ಚಿತ್ರದ ನಿರ್ದೇಶನ, ಚಿತ್ರಕಥೆ ಹಾಗೂ ಸಂಭಾಷಣೆ ಕೂಡ ಅವರದೇ.

ತನುಷ್ ಹಾಗೂ ಶ್ರಾವ್ಯಾ ಚಿತ್ರದ ನಾಯಕನಾಯಕಿ. ಶ್ರಾವ್ಯಾ ಕನ್ನಡ ಪ್ರೇಕ್ಷಕರಿಗೆ ಪರಿಚಿತ ಮುಖ. ತನುಷ್ ‘ಮಡಮಕ್ಕಿ’ ಚಿತ್ರದಲ್ಲಿ ನಾಯಕನಾಗಿ ನಟಿಸಿದವರು. ಈ ಯುವ ಜೋಡಿ ‘ನಂಜುಂಡಿ ಕಲ್ಯಾಣ’ದ ಮೂಲಕ ಪ್ರೇಕ್ಷಕರಿಗೆ ಮೋಡಿ ಮಾಡುವ ತವಕದಲ್ಲಿದೆ. ಕುರಿ ಪ್ರತಾಪ್, ಪದ್ಮಜಾ ರಾವ್ ತಾರಾಗಣದಲ್ಲಿರುವ ಪ್ರಮುಖರು. ನಿರ್ದೇಶಕ ರಾಜೇಂದ್ರ ಕಾರಂತ್ ಕೂಡ ಪ್ರಮುಖ ಪಾತ್ರವೊಂದರಲ್ಲಿ ನಟಿಸಿದ್ದಾರೆ. ರಂಗಭೂಮಿಯ ಹಲವು ಕಲಾವಿದರು ಕೂಡ ಚಿತ್ರದಲ್ಲಿ ನಟಿಸಿದ್ದಾರೆ. ಅನೂಪ್ ಸೀಳಿನ್ ಸಂಗೀತ ಹಾಗೂ ಮಂಜುನಾಥ್ ನಾಯಕ ಛಾಯಾಗ್ರಹಣ ಚಿತ್ರಕ್ಕಿದೆ.





## ರಶ್ಮಿಕಾ ಚೈತ್ರಕಾಲ

‘ಕಿರಿಕ್ ಪಾರ್ಟಿ'ಯ ಸುಂದರಿ ರಶ್ಮಿಕಾ ಮಂದಣ್ಣ ಅವರ ಪಾಲಿಗೆ ಈ ಬಾರಿಯ ಕ್ರಿಸ್ಮತಸ್ ಹಾಗೂ ಹೊಸ ವರ್ಷದ ಆಚರಣೆ ಭರ್ಜರಿಯಾಗಿರಲಿದೆ. ಎರಡು ವಾರಗಳ ಆಸುಪಾಸಿನಲ್ಲಿ ಅವರ ಅಭಿನಯದ ಮೂರು ಸಿನಿಮಾಗಳು ತೆರೆ ಕಾಣುತ್ತಿರುವುದು ಈ ಸಂಭ್ರಮಕ್ಕೆ ಕಾರಣ. 2016ರ ಕೊನೆಯಲ್ಲಿ ತೆರೆ ಕಂಡು 2017ರ ಯಶಸ್ವೀ ಚಿತ್ರಗಳಲ್ಲೊಂದಾಗಿ ಗುರ್ತಿಸಿಕೊಂಡ ‘ಕಿರಿಕ್ ಪಾರ್ಟಿ’ ರಶ್ಮಿಕಾ ಅಭಿನಯದ ಚೊಚ್ಚಿಲ ಸಿನಿಮಾ. ಅದಾದ ನಂತರ ರಶ್ಮಿಕಾ ಅಭಿನಯದ ಯಾವ ಸಿನಿಮಾ ಕೂಡ ತೆರೆಕಂಡಿಲ್ಲ. ಈಗ ಒಮ್ಮೆಗೇ ಮೂರು ಸಿನಿಮಾ ತೆರೆ ಕಾಣುತ್ತಿರುವ ಖುಷಿ ಅವರದು. ಪುನೀತ್ ಜೊತೆಗಿನ ‘ಅಂಜನೀಪುತ್ರ’ ಕ್ರಿಸ್ಮಸ್ಗೂ ಮುನ್ನ ತೆರೆಕಂಡಿದೆ. ಗಣೇಶ್ಗೆರ ಜೋಡಿಯಾಗಿ ನಟಿಸಿರುವ ‘ಚಮಕ್’ ಚಿತ್ರ ವರ್ಷದ ಕೊನೆಯಲ್ಲಿ ತೆರೆ ಕಾಣುವುದು ಸ್ಪಷ್ಟವಾಗಿದೆ. ಹರ್ಷ ನಿರ್ದೇಶನದ ‘ಅಂಜನಿಪುತ್ರ’ ಪುನೀತ್ ಅಭಿಮಾನಿಗಳ ಉತ್ಸಾಹಕ್ಕೆ ಕಾರಣವಾಗಿದ್ದರೆ, ಸಿಂಪಲ್ ಸುನಿ ನಿರ್ದೇಶನದ ‘ಚಮಕ್’ ಗಾಂಧಿನಗರದಲ್ಲಿ ನಿರೀಕ್ಷೆ ಮೂಡಿಸಿರುವ ಸಿನಿಮಾ. ಇವುಗಳ ಜೊತೆಗೆ ರಶ್ಮಿಕಾರ ತೆಲುಗು ಚಿತ್ರ ‘ಚಲೋ’ ಕೂಡ ಡಿಸೆಂಬರ್ ಕೊನೆಯಲ್ಲಿ ಪ್ರೇಕ್ಷಕರ ಮುಂದೆ ಬರುತ್ತಿದೆ. ನಾಗಶೌರ್ಯ ‘ಚಲೋ’ ಚಿತ್ರದ ನಾಯಕ.

‘ಕಿರಿಕ್ ಪಾರ್ಟಿ' ನಂತರ ಸಾಕಷ್ಟು ಅವಕಾಶಗಳು ಎಡತಾಕಿದರೂ ಚಿತ್ರಕಥೆಗಳ ಆಯ್ಕೆಯಲ್ಲಿ ರಶ್ಮಿಕಾ ವಿಪರೀತ ಚೂಸಿ ಆಗಿದ್ದಾರೆ. ಕಥೆಯ ಜೊತೆಗೆ ತಾರಾ ವರ್ಚಸ್ಸಿನ ನಾಯಕರ ಚಿತ್ರಗಳನ್ನು ಅವರು ಒಪ್ಪಿಕೊಳ್ಳುತ್ತಿರುವುದು ವಿಶೇಷ. ವರ್ಷದ ಕೊನೆಯಲ್ಲೇ ರಶ್ಮಿಕಾ ಅಭಿನಯದ ಮತ್ತೊಂದು ಚಿತ್ರ ‘ಪೊಗರು’ ಸೆಟ್ಟೇರುತ್ತಿದೆ. ಈ ಚಿತ್ರದ ನಾಯಕ ಧ್ರುವ ಸರ್ಜಾ ಪ್ರಸ್ತುತ ಗಾಂಧಿನಗರದ ಬೇಡಿಕೆಯ ನಟರಲ್ಲೊಬ್ಬರು. ‘ಭರ್ಜರಿ’ ನಂತರ ಧ್ರುವ ನಟಿಸುತ್ತಿರುವ ಈ ಚಿತ್ರವನ್ನು ನಂದಕಿಶೋರ್ ನಿರ್ದೇಶಿಸುತ್ತಿದ್ದಾರೆ.

■ ರಘು